ಡಾ. ವಿ. ಎಸ್. ಆಚಾರ್ಯ.—ಸ್ಥಳೀಯ ಅಭ್ಯರ್ಥಿಗಳು ಎಂದು ಹೇಳುವವರು, ವಿವಿಧ ಇಲಾಖೆಗಳಲ್ಲಿ ಹುದ್ದೆಗಳಲ್ಲಿ ಇದ್ದಾರೆ. ಅವರಿಗೆ ರಕ್ಷಣೆಕೊಡುವ ದೃಷ್ಟಿಯಿಂದ ಯಾವುದೇ ಇಲಾಖೆಯಲ್ಲಿ ಭರ್ತಿ ಮಾಡುವಂಥ ಕಾಲದಲ್ಲಿ, ಈಗಾಗಲೇ ಇರತಕ್ಕ 1977ನೇ ಇಸವಿಯ ಸರಕಾರಿ ಆಜ್ಞೆ ಪ್ರಕಾರ, ಸ್ಥಳೀಯ ಅಭ್ಯರ್ಥಿಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಇತ್ತು. ಈಗ ಫೆಬ್ರುವರಿ ತಿಂಗಳಲ್ಲಿ ಹೊರಡಿಸಿದ ಆಜ್ಞೆಯಿಂದ, ಈ ಆಜ್ಞೆಯನ್ನು ಹಿಂತೆಗೆದುಕೊಂಡಿದ್ದಾರೆ. ಇದರಿಂದ ರಿಕ್ರೂಟ್‌ಮೆಂಟ್ ಅಥಾರಿಟೀಸ್ ರಿಕ್ರೂಟ್‌ಮೆಂಟ್ ಮಾಡುವಾಗ ಸ್ಥಳೀಯ ಅಭ್ಯರ್ಥಿಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಇಲ್ಲ ಎಂದು ಆಯಿತು.

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನನಗೆ ತಿಳಿದ ಮಟ್ಟಿಗೆ ಹಿಂದೆ ಇದ್ದಂಥ ಆಜ್ಞೆ, ಹಾಗೂ ಪುನ: ಈಗ ಜಾರಿಯಲ್ಲಿರತಕ್ಕಂಥ ಆಜ್ಞೆ ಇವುಗಳು ಒಂದು ಕಡೆ ಇರಲಿ. ಈಗ ಹೈಕೋರ್ಟಿನವರು ಒಂದು ನಿರ್ಣಯ ಕೊಟ್ಟಿದ್ದಾರೆ. ಹೊಸದಾಗಿ ಯಾವ ಹುದ್ದೆಗಳಿಗೆ ನೇಮಕಾತಿಗಳನ್ನು ಮಾಡಲು ನಾವು ಆರ್ಡರ್‌ಗಳನ್ನು ಕರೆಯುತ್ತೇವೋ, ಅವುಗಳಲ್ಲಿ ಶೇಕಡಾ 50 ರಷ್ಟನ್ನು ಸ್ಥಾನೀಕ ಅಭ್ಯರ್ಥಿಗಳಿಗೆ ಮತ್ತು ಸ್ಟೈಫಂಡರಿ ಗ್ರಾಜುಯೇಟ್‌ಗಳಿಗೆ ಕೊಡಬೇಕೆಂದು ಹೈಕೋರ್ಟಿನವರು ನಿರ್ಣಯ ಮಾಡಿದ್ದಾರೆ. ಈ ನಿರ್ಣಯದ ಪ್ರಕಾರ ನಮ್ಮ ಸಚಿವ ಸಂಪುಟ ಒಂದು ತರಾವನ್ನೂ ಪಾಸ್ ಮಾಡಿದೆ, ಇದೇ ರೀತಿ ರಿಕ್ರೂಟ್‌ಮೆಂಟ್‌ನ್ನು ಮಾಡಬೇಕೆಂದು ಮಾಡಿದ್ದೇವೆ ಇದು ಆದಮೇಲೆ ಹಿಂದಿನ ಆಜ್ಞೆ ಜಾರಿಯಲ್ಲಿದ್ದರೇನು ; ಹೋದರೇನು ? ಹಿಂದಿನ ಆಜ್ಞೆಯಲ್ಲಿ ಇಂತಿಷ್ಟನೇ ಹುದ್ದೆ ರಿಸರ್ವ್ ಮಾಡಬೇಕೆಂದು ಇರಲಿಲ್ಲ.

ಸಭಾಧ್ಯಕ್ಷರು.—ಪ್ರಿಫರೆನ್ಸ್ ಕೊಡಬೇಕೆಂದು ಇತ್ತು.

ಶ್ರೀ ರಾಮಕೃಷ್ಣ ಹೆಗಡೆ.—ಪ್ರಿಫರೆನ್ಸ್ ಅಲ್ಲ, ಹೊಸ ಅಭ್ಯರ್ಥಿಗಳು ನೇಮಕ ಮಾಡುವಾಗ ಸ್ಥಾನೀಕ ಅಭ್ಯರ್ಥಿಗಳನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ಮಾತ್ರ ಇತ್ತು. ಈಗ 100ಕ್ಕೆ 50ರಷ್ಟು ರಿಸರ್ವೇಷನ್ ಮಾಡಿರುವಾಗ, ಇವರಿಗೆ ಅಂಜಿಕೆ ಏತಕ್ಕೆ ಎಂದು ನನಗೆ ಅರ್ಥವಾಗುವುದಿಲ್ಲ.

ಡಾ. ಎಂ. ಪಿ. ಕರ್ಕಿ (ಕುಮಟಾ).—ಮಾನ್ಯ ಅಧ್ಯಕ್ಷರೇ, ಭಟ್ಕಳ ತಾಲ್ಲೂಕಿನಲ್ಲಿ ಕಾಲೇಜ್ ಆಸ್ಪತ್ರೆಯೊಂದು ಇದೆ. ಅನೇಕ ವರ್ಷಗಳಿಂದ ಈ ಆಸ್ಪತ್ರೆಯು ತಾಲ್ಲೂಕಿನ ನಾಗರೀಕರಿಗೆ ಅಲ್ಲದೆ ಹೊನ್ನಾವರ ತಾಲ್ಲೂಕಿನ ಜನರಿಗೂ ಉಪಚಾರ ಮಾಡುತ್ತಿತ್ತು. ಕಳೆದ 2 ವರ್ಷದಲ್ಲಿ ಆ ಆಸ್ಪತ್ರೆಗೆ ಬಂದ ಸರ್ಜನ್ ಮತ್ತು ಅಲ್ಲೇ ಇದ್ದ ಫಿಜಿಷಿಯನ್ ಇವರ ಇಬ್ಬರ ನಡುವೆ ಬಹಿರಂಗ ಜಗಳ ನಡೆದು ಜನರಿಗೆ ಯೋಗ್ಯ ಉಪಚಾರವಾಗುತ್ತಿಲ್ಲ. ಇದರಿಂದ ಅನೇಕರಿಗೆ ಮಾರಕವಾಗಿದೆ. ಸರ್ಕಾರದ ಗಮನಕ್ಕೆ ಈ ವಿಷಯವನ್ನು ತಂದಾಗ ಸರ್ಕಾರವು ಒಬ್ಬರನ್ನು ಬೇರೆಡೆಗೆ ವರ್ಗಾವಣೆ ಮಾಡಿತ್ತು. ಮತ್ತೆ ಏಕೋ ಏನೋ ತಿರುಗಿ ಅಲ್ಲಿಗೆ ಅವರನ್ನು ಪ್ರತಿಷ್ಠಾಪಿಸಿದ್ದಾರೆ. ಈಗ್ಗೆ 2 ವರ್ಷಗಳ ಹಿಂದೆ ಡಾ. ಮುನಿಯಪ್ಪನವರು ಆಸ್ಪತ್ರೆಗೆ ಬಂದಾಗ ಉಪಕರಣಗಳ ಕೊರತೆಯಿಂದ ಬೇಗ ಹಾಕಿಕೊಂಡು ತೊಂದರೆ ಕೊಡುತ್ತಿದ್ದಾರೆ. ಈ ಬೇಗವನ್ನು ತೆಗೆಸಿದಾಗ ಸರ್ಕಾರಿ ಆಸ್ಪತ್ರೆಯ ಸಾಮಗ್ರಿಗಳನ್ನು ಲೂಟಿ ಮಾಡಲು ಬಂದಿರುವುದಾಗಿ ಪ್ರಮುಖರು ಕೆಲವರು ಪೋಲಿಸರಿಗೆ ದೂರು ಕೊಟ್ಟಿದ್ದಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿ ನಡೆಯುತ್ತಿರುವ ಈ ರೀತಿಯ ವಿದ್ಯಮಾನಗಳನ್ನು ಕೂಡಲೇ ಗಮನಿಸಬೇಕೆಂದು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ.

ವಿಷಯ : (xii) ಹೊರಗಡೆ ರಾಜ್ಯಗಳಿಂದ ಬರತಕ್ಕ ಅಕ್ಕಿ ಲಾರಿಗಳನ್ನು ಹಿಡಿದಿರುವ ಬಗ್ಗೆ.

ಶ್ರೀ ರುಕ್ಮಯ್ಯ ಪೂಜಾರಿ (ವಿಟ್ಲ).—ಅಧ್ಯಕ್ಷರೇ, ನಮ್ಮ ರಾಜ್ಯದೊಳಗೆ ಅಕ್ಕಿಯನ್ನು ತರುವುದಕ್ಕೆ ಯಾವುದೇ ನಿರ್ಬಂಧವಿಲ್ಲ. ಆದರೂ ಸಹ ರಾಜ್ಯದ ಗಡಿ ಭದ್ರತೆಯವರು ಈ ಬಗ್ಗೆ ವಿಪರೀತ ತೊಂದರೆಯನ್ನು ಕೊಡುತ್ತಾ ಇದ್ದಾರೆ. ಇದರಿಂದ ಮುಂದಿನ ದಿನಗಳಲ್ಲಿ ಅಕ್ಕಿಯ ಪರಿಸ್ಥಿತಿ ತುಂಬಾ ಗಂಭೀರವಾಗಬಹುದು. ಮೊನ್ನೆತಾನೆ ಆಂಧ್ರದಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಬರುತ್ತಿದ್ದ ಅಕ್ಕಿಯಿದ್ದ ಲಾರಿಯನ್ನು (ಲಾರಿ ನಂ. ಎಂ. ವೈ. ಎ. 6496) ತಡೆ ಹಿಡಿದಿದ್ದು ಅದನ್ನು ಬಿಡಬೇಕಾದರೆ ಶಿವಮೊಗ್ಗ ಜಿಲ್ಲಾಧಿಕಾರಿಗಳ ಒಪ್ಪಿಗೆಬೇಕೆಂದು ತೊಂದರೆ ಕೊಡುತ್ತಿದ್ದಾರೆ. ಇದನ್ನು ನೋಡುವುದಾದರೆ ಅಧಿಕಾರಿಗಳು ಲಂಚ ಪಡೆಯುವ ದೃಷ್ಟಿಯಿಂದ ಈ ಕಿರುಕುಳವನ್ನು ಕೊಡುತ್ತಿದ್ದಾರೆಂದು ಗೊತ್ತಾಗುತ್ತದೆ, ಆದುದರಿಂದ ಸರ್ಕಾರದವರು ಇದರ ಕಡೆಗೆ ತೀವ್ರವಾಗಿ ಗಮನ ಹರಿಸಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಜಿ. ಬಸವಣ್ಯಪ್ಪ (ಮಾನ್ಯ ಆಹಾರ ಖಾತೆಯ ಮಂತ್ರಿಗಳು).—ಅಧ್ಯಕ್ಷರೇ ಲೆವಿ ಆಜ್ಞೆಯ ಪ್ರಕಾರ ಭತ್ತ ಮಿಲ್ ಪಾಯಿಂಟ್‌ನಲ್ಲಿ ಹಲ್ ಆದಾಗ 50 ಪರ್‌ಸೆಂಟ್ ಲೆವಿ ಕೊಡಬೇಕು. ಇನ್ನು ಮಿಕ್ಕ 50 ಪರ್‌ಸೆಂಟ್ ಅಕ್ಕಿಯು ರಾಷ್ಟ್ರಮಟ್ಟದಲ್ಲಿ ಎಲ್ಲಿಯಾದರೂ ಅಕ್ಕಿ ಮೂವ್ ಆಗಬಹುದು. ಈಗ

ಮಾನ್ಯ ಸದಸ್ಯರು ಆಂಧ್ರದಿಂದ ಬಂದಂತಹ ಅಕ್ಕಿ ಲಾರಿಯನ್ನು ಹಿಡಿದಿದ್ದಾರೆಂದು ಹೇಳಿದ್ದಾರೆ. ಆಂಧ್ರದಿಂದ ಅಕ್ಕಿಯನ್ನು ತರುವಾಗ ರಿಲೀಸ್ ಆರ್ಡರ್ ಮುಂತಾದ ಡಾಕ್ಯೂಮೆಂಟ್‌ಗಳನ್ನು ಕೊಟ್ಟರೆ ಹಿಡಿಯತಕ್ಕ ಪ್ರಶ್ನೆ ಬರುವುದಿಲ್ಲ. ಲೆವಿ ನೀತಿಯ ಪ್ರಕಾರ ಹಿಂದು ಕಡೆಯಿಂದ ಇನ್ನೊಂದು ಕಡೆಗೆ ಅಕ್ಕಿಯನ್ನು ಸರಬರಾಜು ಮಾಡುವಾಗ ಸರಿಯಾದ ಡಾಕ್ಯೂಮೆಂಟ್ಸ್ ಇಲ್ಲದಿದ್ದರೆ ರಾಷ್ಟ್ರದ ಯಾವ ಭಾಗಕ್ಕೇ ಆಗಲಿ ಅಕ್ಕಿಯು ಹೋಗುವ ಹಾಗಿಲ್ಲ. ಹೊರ ರಾಜ್ಯದಿಂದ ಬರತಕ್ಕ ಅಕ್ಕಿಗೆ ನಮ್ಮ ರಾಜ್ಯದೊಳಗೆ ಬರಲು ವಿಶೇಷ ಕನ್‌ಸೆಷನ್ ತೋರಿಸಿ ಎಂದು ನಮ್ಮ ಜಿಲ್ಲಾಧಿಕಾರಿಗಳಿಗೆ ಓರಲ್ ಆಗಿ ಹೇಳಬಹುದು ಆದರೆ ಆಜ್ಞೆಯ ಮುಖಾಂತರ ಕಳುಹಿಸಲು ಆಗುವುದಿಲ್ಲ.

ಡಾ. ವಿ. ಎಸ್. ಆಚಾರ್ಯ.— ಮಾನ್ಯ ಸಚಿವರು ಸದಸ್ಯರು ಹೇಳಿರುವುದನ್ನು ಸರಿಯಾಗಿ ಅರ್ಥ ಮಾಡಿಕೊಂಡಂತೆ ಕಾಣುತ್ತಿಲ್ಲ. ಆಂಧ್ರದಿಂದ ಅಕ್ಕಿಯನ್ನು ತರುತ್ತಿದ್ದ ಲಾರಿಯವರು ಸರಿಯಾದ ಡಾಕ್ಯುಮೆಂಟ್ಸನ್ನು ಹೊಂದಿದ್ದರೂ ಸಹ ಹಿಡಿದಿದ್ದಾರೆ. They should be welcome any amount of rice coming from Andhra.

Mr. Speaker.— Mr. Acharya this is not your 334 matter.

ಡಾ. ವಿ. ಎಸ್. ಆಚಾರ್ಯ.— ಆಂಧ್ರದಿಂದ ಬರತಕ್ಕ ಅಕ್ಕಿ ತರತಕ್ಕ ಲಾರಿಗಳವರಿಗೆ ನಮ್ಮ ಗಡಿಗಳವರು ಬಹಳ ತೊಂದರೆ ಮಾಡುತ್ತಿದ್ದಾರೆ.

ಅಧ್ಯಕ್ಷರು.— ರಿಸ್ಟ್ರಿಕ್ಷನ್ ಏನೂ ಇಲ್ಲ.

ಶ್ರೀ ಜಿ. ಬಸವಣ್ಣಪ್ಪ.— ಚೆಕ್‌ಪೋಸ್ಟ್‌ನಲ್ಲಿ ಲಾರಿಯ ಎಲ್ಲಾ ಡಾಕ್ಯುಮೆಂಟ್ಸ್ ಇದ್ದರೂ ಹಿಡಿದಿದ್ದಾರೆಂದು ಹೇಳಿದ್ದಾರೆ. ನಾನು ಜಿಲ್ಲಾಧಿಕಾರಿಗಳಿಗೆ ಹೇಳಿ ಅಂಥವುಗಳ ಬಿಡುಗಡೆಗೋಸ್ಕರವಾಗಿ ಪ್ರಯತ್ನ ಮಾಡುತ್ತೇನೆ.

ವಿಷಯ : (xiii) ಕೈವಾರದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶಾಸಕರಾದ ಶ್ರೀ ಬೈರೇಗೌಡರವರು ಬಂಗಾರಪೇಟೆ ಮತ್ತು ಕೆ ಜಿ. ಎಫ್. ಸಂಘದವರನ್ನು ವಾಚಾಮಗೋಚರವಾಗಿ ಬೈದಿರುವ ಬಗ್ಗೆ.

ಶ್ರೀ ನಾರಾಯಣಕುಮಾರ್ (ಬನ್ನಿಪೇಟೆ ಕ್ಷೇತ್ರ).— ಸನ್ಮಾನ್ಯ ಅಧ್ಯಕ್ಷರೇ, ದಿನಾಂಕ 23, 24, 25ರಂದು ಕೈವಾರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಅಖಿಲ ಭಾರತದ 56ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಆಚರಿಸಿದರು. ಆ ಸಂದರ್ಭದಲ್ಲಿ ಬಂಗಾರಪೇಟೆ ಮತ್ತು ಕೆ. ಜಿ. ಎಫ್. ಕನ್ನಡ ಸಂಘದವರು ತಮಗಾಗಿರುವ ಅನ್ಯಾಯವನ್ನು ಪ್ರತಿಭಟಿಸಿ ಮುಖ್ಯಮಂತ್ರಿಗಳ ಹತ್ತಿರ ತಮ್ಮ ನೋವನ್ನು ತೋಡಿಕೊಂಡರು. ಆಗ ಮುಖ್ಯಮಂತ್ರಿಗಳು ಅವರ ನೋವನ್ನು ಪರಿಹರಿಸಲು ತಮ್ಮ ಉತ್ತರವನ್ನು ಕೊಟ್ಟು ತಮ್ಮ ಕಾರ್ಯ ನಿಮಿತ್ತವಾಗಿ ಹೊರಟುಹೋದರು. ಅದಾದ ನಂತರ ಈ ಸಮ್ಮೇಳನ ಬಹಿರಂಗ ಅಧಿವೇಶನದಲ್ಲಿ ಅಲ್ಲಿನ ಶಾಸಕರಾದ ಶ್ರೀ ಬೈರೇಗೌಡರು. ಬಂಗಾರಪೇಟೆ ಮತ್ತು ಕೆ. ಜಿ. ಎಫ್. ಕನ್ನಡ ಸಂಘದವರನ್ನು ಅವರು ಕೇಳಿದ ಪ್ರಶ್ನೆಗೆ ಸರಿಯಾದ ಉತ್ತರವನ್ನು ಕೊಡದೆ ವಾಚಾಮಗೋಚರವಾಗಿ ಅವರನ್ನು ಹೆದರಿಸಿದ್ದಾರೆ.

ಅಧ್ಯಕ್ಷರು.— ಅವರು ಸದನದಲ್ಲಿ ಇಲ್ಲದೆ ಇರುವಾಗ ಅವರ ಮೇಲೆ ಆಪಾದನೆ ಮಾಡುವುದು ಸರಿಯಲ್ಲ. ಆಪಾದನೆ ಮಾಡುವುದಾದರೆ ಮೊದಲು ತಾವು ನೋಟೀಸ್ ಕೊಡಬೇಕು.

ಶ್ರೀ ಜಿ. ನಾರಾಯಣಕುಮಾರ್.— ನಾನು ಅವರ ಮೇಲೆ ಆಪಾದನೆಯನ್ನು ಮಾಡುತ್ತಿಲ್ಲ. ಅವರು ಅಲ್ಲಿ ನಡೆದುಕೊಂಡ ರೀತಿಯನ್ನು ಇಲ್ಲಿ ಹೇಳುತ್ತಿದ್ದೇನೆ. ಅಲ್ಲಿನ ತಮಿಳರಿಂದ ಕನ್ನಡದವರು ಹೊಡೆತ ತಿಂದು ಆ ಊರಿನಲ್ಲಿ ವಾಸಮಾಡುತ್ತಿದ್ದಾರೆ. ಅವರು ತಮ್ಮ ನೋವನ್ನು ಮುಖ್ಯಮಂತ್ರಿಗಳ ಹತ್ತಿರ ನಿವೇದಿಸಿಕೊಂಡಿದ್ದಾರೆ. ನಮ್ಮ ಜಿಲ್ಲೆಯ ಶಾಸಕರಾದ ನೀವು ನಮಗೆ ಏನು ಮಾಡಿದ್ದೀರಿ ಎಂದು ಅವರು ಕೇಳಿದ್ದಕ್ಕೆ, ಶಾಸಕರು ಆ ನೋವಿನಲ್ಲಿರತಕ್ಕ ಜನರಿಗೆ ಸಮಜಾಯಿಷಿ ಕೊಡುವುದರ ಬದಲಾಗಿ ಅವರನ್ನು ವಾಚಾಮಗೋಚರವಾಗಿ ಬೈದಿದ್ದಾರೆ. ನೀವು ಕನ್ನಡ ಸಂಘಗಳನ್ನು ಕಟ್ಟಿಕೊಂಡು ಹೇಗೆ ಬಾಳುತ್ತೀರಿ ಎಂಬುದನ್ನು ನಾನು ನೋಡುತ್ತೇನೆಂದು ಸಹ ಹೆದರಿಸಿದ್ದಾರೆ. ಈ ದೇಶದಲ್ಲಿ ಸ್ವಾತಂತ್ರ್ಯ ಇದೆಯೋ ಇಲ್ಲವೋ ಗೊತ್ತಾಗುತ್ತಿಲ್ಲ. ಅಲ್ಲಿನ ಕನ್ನಡ ಸಂಘದವರೆಲ್ಲಾ ಇಲ್ಲಿಗೆ ಬಂದಿದ್ದಾರೆ. ಕೆ. ಜಿ. ಎಫ್.ನಲ್ಲಿ ಮತ್ತು ಬಂಗಾರಪೇಟೆಯಲ್ಲಿ ಕನ್ನಡ ಚಲನಚಿತ್ರಗಳು ಪ್ರದರ್ಶನವಾಗುತ್ತಿಲ್ಲ. ಈ ರೀತಿ ಆಗುತ್ತಿರುವುದಕ್ಕೆ ಸೂಕ್ತ ರಕ್ಷಣೆಕೊಡಿ ಎಂದು ಆ ಶಾಸಕರನ್ನು ಕೇಳಿದ್ದಕ್ಕೆ ಅವರು ಆ ರೀತಿ ಜನರನ್ನು ಬೈಯಬಹುದೇ ? ಕೈವಾರದಲ್ಲಿ ನಡೆಯುತ್ತಿರುವ ಸಮ್ಮೇಳನ ಬಡವರ ಮತ್ತು ಕನ್ನಡದವರ ಸಮ್ಮೇಳನವಲ್ಲವೇ ? ಅದು ಎಂ. ಎಸ್. ರಾಮಯ್ಯನವರ ಮತ್ತು ಶ್ರೀಮಂತರ ಸಮ್ಮೇಳನವೇ ? ಮಾನ್ಯ ಅಧ್ಯ